1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ:4571/2022

ಪಿರ್ಯಾದಿ : ಕವಲಂದೆ ಪೊಲೀಸರು

ವಿರುದ್ಧ

ಆರೋಪಿ : 1 ಕಾರ್ತಿಕ್ .ಎಸ್ , ಬಿನ್.ಶಿವಶಂಕರ, 30 ವರ್ಷ

2 ಮಹದೇವಸ್ವಾಮಿ, ಬಿನ್ ಲೇಟ್.ಮುದ್ದುಮಾದಯ್ಯ, 33 ವರ್ಷ

ಇಬ್ಬರ ವಾಸಃ ವೀರೇಗೌಡನಹುಂಡಿ ಗ್ರಾಮ, ನಂಜನಗೂಡು ತಾ.

ದೋಷಾರೋಪಣೆ

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., *1*ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕಃ 03.06.2021 ರಂದು 22.00 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ವೀರೇಗೌಡನಹುಂಡಿ ಗ್ರಾಮದ ಪರಿಶಿಷ್ಟ ಜನಾಂಗದ ಬೀದಿಯಲ್ಲಿರುವ ಅರಳಿಕಟ್ಟೆಯ ಮೇಲೆ 1 ಮತ್ತು 2 ನೇ ಆರೋಪಿತರಾದ ನೀವು ಮತ್ತು ಚಾಸಾ.1 ರವರು ಮದ್ಯಪಾನವನ್ನು ಸೇವಿಸುತ್ತಿದ್ದಾಗ, ಚಾಸಾ.1 ರವರು 1 ನೇ ಆರೋಪಿತರಾದ ನಿಮಗೆ ನೀನು ಇಷ್ಟೊಂದು ಕುಡಿಯುತ್ತೀಯಲ್ಲಾ, ನಿನಗಿಂತ ನಿನ್ನ ತಮ್ಮ ಪರವಾಗಿಲ್ಲ ಆತನು ಕುಡಿಯುವುದಿಲ್ಲಾ, ಒಳ್ಳೆಯ ಹುಡುಗನೆಂದು ಹೇಳಿದಾಗ, 1 ನೇ ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಚಾಸಾ.1 ರವರಿಗೆ ನಿನ್ನನ್ನು ಕುಡಿಯಲು ಕರೆದರೆ ನನಗೆ ಎದುರು ಮಾತನಾಡುತ್ತೀಯ ಎಂದು ತೀಟೆ ಜಗಳ ತೆಗೆದು ಬೋಳಿ ಮಗನೆ, ಸೂಳೆ ಮಗನೆ ಎಂದು ಬೈದಿದ್ದು, ನಂತರ 22.30 ಗಂಟೆ ಸಮಯದಲ್ಲಿ ಚಾಸಾ.1 ರವರ ಮನೆ ಮುಂದೆ 1 ಮತ್ತು 2 ನೇ ಆರೋಪಿತರಾದ ನೀವು ಹೋಗಿ ಬಾರೋ ಬಡ್ಡಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ, ಅದೇ ದಿನ, 22.30 ಗಂಟೆ ಸಮಯದಲ್ಲಿ ಚಾಸಾ.1 ರವರ ಮನೆಯ ಮುಂದೆ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 1ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ದೊಣ್ಣೆಯಿಂದ ಎಡತಲೆಗೆ, ಬಲಕೈಗೆ ಹೊಡೆದಿರುತ್ತೀರಿ, ಜಗಳ ಬಿಡಿಸಲು ಬಂದ ಚಾಸಾ.2 ರವರ ಎಡಕೆನ್ನೆಗೆ ದೊಣ್ಣೆಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.324 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 2 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು, ಕೆಳಗೆ ಕೆಡವಿ ಕಾಲಿನಿಂದ ಒದ್ದಿರುತ್ತೀರಿ ಮತ್ತು ಚಾಸಾ.3 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 2 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಈ ಬೋಳಿ ಮಗನನ್ನು ಉಳಿಸುವುದು ಬೇಡ ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 11.06.2025 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಖ್ಯೆ:4571/2022**

**ಪಿರ್ಯಾದಿ** : ಕವಲಂದೆ ಪೊಲೀಸರು

**ವಿರುದ್ಧ**

**ಆರೋಪಿ** :

1 ಕಾರ್ತಿಕ್ .ಎಸ್ , ಬಿನ್.ಶಿವಶಂಕರ, 30 ವರ್ಷ

2 ಮಹದೇವಸ್ವಾಮಿ, ಬಿನ್ ಲೇಟ್.ಮುದ್ದುಮಾದಯ್ಯ, 33 ವರ್ಷ

ಇಬ್ಬರ ವಾಸ: ವೀರೇಗೌಡನಹುಂಡಿ ಗ್ರಾಮ, ನಂಜನಗೂಡು ತಾ.

: ಆಪಾದನೆ :

ಪ್ರಶ್ನೆ-1 : ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ :

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ :

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**